

ಸುರಕ್ಷಿತವಾಗಿ ಸಮುದ್ರದಲ್ಲಿ ಲ್ಯಾಂಡ್ ಆದ ನೌಕೆ



ಗಗನಕ್ಕೆ ಚಿಮ್ಮಿದ ನೌಕೆ

ಅಗತ್ಯವಾಗುತ್ತದೆ. ಆ ನೌಕೆಯನ್ನು ನಿರ್ಮಿಸುವ ಕಾಂಟ್ರಾಕ್ಟ್ ಅನ್ನು ಎಲಾನ್ ಮಸ್ಕ್ ಅವರ ‘ಸ್ಪೇಸ್ ಎಕ್ಸ್’ ಎಂಬ ಖ್ಯಾತ ಖಾಸಗಿ ಸಂಸ್ಥೆಗೆ ‘ನಾಸಾ’ ಈ ಹಿಂದೆ ನೀಡಿತ್ತು. ಅದಕ್ಕಾಗಿ ಸ್ಪೇಸ್ ಎಕ್ಸ್ ‘ಸ್ಟಾರ್ ಶಿಪ್ ಮಾನವರನ್ನು ಇಳಿಸುವ ವ್ಯವಸ್ಥೆ’ ಎಂಬ ನೌಕೆಯ ನಿರ್ಮಾಣದಲ್ಲಿಂದು ಮಗ್ನವಾಗಿ ತಕ್ಕಮಟ್ಟಿಗೆ ಮುನ್ನಡೆಯನ್ನು ಸಾಧಿಸಿದ್ದರೂ ಮುಂದಿನ ಒಂದು ವರ್ಷದಲ್ಲಿ ಆ ಬೃಹತ್ ನೌಕೆ ಯಾನಕ್ಕೆ ಸಿದ್ಧವಾಗುವ ಸಾಧ್ಯತೆ ಅತ್ಯಂತ ಕಡಿಮೆ. ಇದರಿಂದಾಗಿ ಈ ಹಿಂದೆ ಅಂದುಕೊಂಡಂತೆ ‘ಆರ್ಟೆಮಿಸ್ 3’ರಲ್ಲಿ ಮಾನವರನ್ನು 2027ರಲ್ಲಿ ಚಂದ್ರನ ಮೇಲೆ ಇಳಿಸಲಾಗದು.

ಇದೆಲ್ಲವೂ ಸುಗಮವಾಗಿ ಸಾಗಿ ಈ ಸಂಬಂಧದಲ್ಲಿ ನಾಸಾ ಸಾಕಷ್ಟು ಅನುಭವ ಪಡೆದ ನಂತರ ಚಂದ್ರನ ಮೇಲೆ ನೆಲೆಯೊಂದನ್ನು ಅಲ್ಲಿನ ದಕ್ಷಿಣ ಧ್ರುವ ಪ್ರದೇಶದಲ್ಲಿ ಸ್ಥಾಪಿಸುವ ಕಾರ್ಯ ಹಂತಹಂತವಾಗಿ ಆರಂಭವಾಗಲಿದೆ. ಈ ಕಾರ್ಯಕ್ಕೆ ಸಂಬಂಧಿಸಿದಂತೆ ಇಂದು ಅಮೆರಿಕಕ್ಕೆ ಪ್ರಬಲ ಪ್ರತಿಸ್ಪರ್ಧಿಯಾಗಿ ಬೆಳೆದಿರುವ ಚೀನಾ ಅದಕ್ಕೆ ಪ್ರಮುಖವಾಗಿ ಸವಾಲುಗಳನ್ನು ತಂದೊಡ್ಡಲಿದೆ.

ಇಂದು ಚಂದ್ರನ ಮೇಲೆ ಮತ್ತೆ ಆಸಕ್ತಿ ಮೂಡಿರುವುದಕ್ಕೆ ಅಲ್ಲಿರುವ, ಅದರಲ್ಲೂ ಅಲ್ಲಿನ ಧ್ರುವ ಪ್ರದೇಶಗಳಲ್ಲಿರುವ ‘ನೀರು’, ಅಲ್ಲಿನ ಅಪಾರವಾದ ಉಷ್ಣತೆಯಿಂದ ರಕ್ಷಣೆ ನೀಡುವ ಚಂದ್ರನ ಮಣ್ಣು, ಇಂದಿನ ಕೈಗಾರಿಕಾ ನಾಗರೀಕತೆಗೆ ಅಗತ್ಯವಾದ ಲೋಹಗಳು ಸೇರಿದಂತೆ ಅನೇಕ ಖನಿಜ ಹಾಗೂ ಇಂಧನ ಸಂಪನ್ಮೂಲಗಳು ಕಾರಣವಾಗಿವೆ. ಇವುಗಳನ್ನು ಮತ್ತಷ್ಟು ಕೂಲಂಕಷವಾಗಿ ಅನ್ವೇಷಿಸುವ ನಡುವೆ ಯಾವ ಬಗೆಯ ಭಿನ್ನಾಭಿಪ್ರಾಯಗಳು ಜಾಗತಿಕ ಮಟ್ಟದಲ್ಲಿ ಮೂಡುವುವೋ ಎಂಬುದನ್ನು ಈಗಲೇ ಹೇಳಲಾಗದು. ಅದೇ ರೀತಿ ಚಂದ್ರನೂ ಒಳಗೊಂಡಂತೆ ಅಂತರಿಕ್ಷವು ಇಡೀ ಮಾನವ ಕುಲಕ್ಕೆ ಸೇರಿದ್ದು ಎಂಬುದಾಗಿ ಈ ಹಿಂದೆ ವಿಶ್ವಸಂಸ್ಥೆಯಲ್ಲಿ ಒಪ್ಪಂದವಾಗಿದೆ. ಹಾಗಾದರೆ ತನಗೆ ಸೇರಿರದ ಯಾವುದೇ ಒಂದು ಸ್ಥಳದಿಂದ ಅಲ್ಲಿನ ಸಂಪನ್ಮೂಲಗಳನ್ನು ದೇಶವೊಂದು ಬಳಸಿಕೊಳ್ಳಬಹುದೇ?

ಇದಕ್ಕೆ ಖಚಿತವಾದ ಉತ್ತರ ಸದ್ಯಕ್ಕೆ ದೊರಕಿಲ್ಲ. ಆದರೆ ಚಂದ್ರನತ್ತ ಅನೇಕ ರೊಬೋಟ್ ನೌಕೆಗಳು ಹಾಗೂ ಈ ಮುಂದೆ ಮಾನವರನ್ನು ಹೊತ್ತ ನೌಕೆಗಳು ಸಾಗುವುದು ಅನುಮಾನವಿಲ್ಲದಾಗಿ ಅವುಗಳನ್ನು ಸ್ವಾಗತಿಸುವಲ್ಲಿ ಚಂದ್ರ ಗಡಿಬಿಡಿಯಿಂದ ಇರುವುದಂತೂ ಖಚಿತವಾದಂತೆ ಕಾಣುತ್ತದೆ.

ಇದೀಗ ಮಾನವನ ಚಿತ್ತ, ಮತ್ತೆ ಚಂದ್ರನತ್ತ.

ಪ್ರತಿಕ್ರಿಯಿಸಿ: feedback@sudha.co.in



ದೈತ್ಯ ಪ್ಯಾರಾಚ್ಯೂಟ್‌ಗಳ ನೆರವಿನೊಂದಿಗೆ ಕ್ಯಾಲಿಫೋರ್ನಿಯಾ ಸಮೀಪದ ಶಾಂತ ಸಾಗರದ ಮೇಲೆ ನೌಕೆ ಇಳಿಯುತ್ತಿರುವ ದೃಶ್ಯ.